19

ಇಲಾಖೆ / ವಿಷಯ : DEPARTMENT / SUBJECT: ಸಂಸತ್

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE : 20/1/2021

# ಸಂಸದರಿಗೆ ಕ್ಯಾಂಟೀನ್ ಸಬ್ಸಿಡಿ ಇನ್ಮುಂದೆ ಖತಂ: 8 ಕೋಟಿ ಉಳಿತಾಯ

ಕ. ಪ್ರ 20/1/21

ನವದೆಹಲಿ: ಸಂಸತ್ ಕ್ಯಾಂಟೀನ್‌ನಲ್ಲಿ ಸಂಸದರಿಗೆ ಹಾಗೂ ಇತರರಿಗೆ ನೀಡುತ್ತಿದ್ದ ಸಬ್ಸಿಡಿ ರದ್ದತಿಗೆ ನಿರ್ಧರಿಸಲಾಗಿದೆ. ಲೋಕಸಭಾಧ್ಯಕ್ಷ ಓಂ ಬಿರ್ಲಾ ಈ ವಿಷಯ ತಿಳಿಸಿದರು. 'ಇನ್ನು ಸಂಸತ್ ಕ್ಯಾಂಟೀನ್ ಅನ್ನು ಉತ್ತರ ರೈಲ್ವೆ ಬದಲು ಐಟಿಡಿಸಿ ನಿರ್ವಹಿಸಲಿದೆ' ಎಂದೂ ಪ್ರಕಟಿಸಿದರು. ಸಬ್ಸಿಡಿ ರದ್ದತಿ ನಿರ್ಧಾರದಿಂದ ಸರ್ಕಾರದ ಬೊಕ್ಕಸಕ್ಕೆ ವಾರ್ಷಿಕ 8 ಕೋಟಿ ರು. ಉಳಿತಾಯವಾಗಲಿದೆ ಸಬ್ಸಿಡಿ ನೀಡುತ್ತಿದ್ದ ಕಾರಣ ಸಂಸತ್ ಕ್ಯಾಂಟೀನ್‌ನಲ್ಲಿ ಚಹಾ/ಕಾಫಿಗೆ 5 ರು., ಒಂದು ವೆಜ್ ಊಟಕ್ಕೆ 35 ರು., ಉಪ್ಪಿಟ್ಟು/ಅವಲಕ್ಕಿಗೆ 18 ರು., ಸೂಪ್‌ಗೆ 14 ರು., ದಾಲ್‌ಗೆ 5 ರು., ಚಪಾತಿಗೆ 2 ರು. ದರ ನಿಗದಿಯಾಗಿತ್ತು.